## ಸಿ.ಬಿ.ಐ.

ನಗರದ ದೊಡ್ಡ ಆಸ್ಪತ್ರೆಯೊಂದರಲ್ಲಿ ಕೆಮ್ಮು–ನೆಗಡಿಯ ಪರೀಕ್ಷೆ ಮಾಡಿಸಿಕೊಂಡ ಗುಂಡನಿಗೆ ಕೋವಿಡ್ ಪಾಸಿಟಿವ್ ಇದೆ ಎಂದು ಹೇಳಿದರು. ಆತನಿಗೆ ತಕ್ಷಣ ವೆಂಟಿಲೇಟರ್‌ನ ಅಗತ್ಯವಿದ್ದು, 10 ದಿನ ಆಸ್ಪತ್ರೆಯಲ್ಲಿಯೇ ಇರಬೇಕು, ಮೂರು ಲಕ್ಷ ರೂಪಾಯಿ ಖರ್ಚು ಆಗಬಹುದೆಂದು ತಿಳಿಸಿದರು.

ಜೀವ ಉಳಿದರೆ ಸಾಕೆಂದು ಗುಂಡ ಒಪ್ಪಿಕೊಂಡ. ಫಾರಂ ಭರ್ತಿ ಮಾಡುವಾಗ ಸರ್ವಿಸ್ ಕಾಲಂನಲ್ಲಿ 'ಸಿ.ಬಿ.ಐ.' ಎಂದು ಬರೆದ. ಅದನ್ನು ಗಮನಿಸಿದ ಆಸ್ಪತ್ರೆಯವರು ವೈದ್ಯರ ತಂಡವೊಂದನ್ನು ಕಳುಹಿಸಿ ಪುನಃ ಪರೀಕ್ಷಿಸಿದರು. ಬಳಿಕ ಗುಂಡನಿಗೆ ಸಾಮಾನ್ಯ ನೆಗಡಿ, ಕಫ ಇದೆಯೆಂದು ತಿಳಿಸಲಾಯಿತು! ವಾಸ್ತವಾಂಶವೆಂದರೆ, ಗುಂಡ ಸಿ.ಬಿ.ಐ. ಎಂದರೆ ಸೆಂಟ್ರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ ಅಲ್ಲ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಕಾರ್ಯನಿರ್ವಹಿಸುತ್ತಿದ್ದ!

**ರಮಣ್ ಶೆಟ್ಟಿ ರೆಂಜಾಳ್**





## ಚಿಕಿತ್ಸೆ

ಮಂಕನ ಹೆಂಡತಿ ಪಮ್ಮಿ ಖಿನ್ನತೆಗೆ ಒಳಗಾಗಿದ್ದಳು. ಮಂಕ ಆಪ್ತಸಮಾಲೋಚನೆಗಾಗಿ ಹೆಂಡತಿಯನ್ನು ಮನೋವೈದ್ಯರ ಬಳಿ ಕರೆದುಕೊಂಡು ಬಂದ. ಕೂಲಂಕಷವಾಗಿ ಪರೀಕ್ಷಿಸಿದ ವೈದ್ಯರು ಆಕೆಯನ್ನು ತಬ್ಬಿಕೊಂಡು, ತಲೆ ನೇವರಿಸಿ, ಕೆನ್ನೆಗೆ ಮುತ್ತು ಕೊಟ್ಟು, ಮಂಕನ ಕಡೆ ತಿರುಗಿ, 'ನಿಮ್ಮ ಹೆಂಡತಿಗೆ ಬೇಕಾಗಿರುವುದು ಈ ಚಿಕಿತ್ಸೆ. ವಾರಕ್ಕೆ ಮೂರು ಸಲ ಹೀಗೆ ಮಾಡಿದರೆ ಅವರು ಪೂರ್ತಿ ಸರಿಹೋಗುತ್ತಾರೆ' ಎಂದರು. ಆಗ ಮಂಕ, 'ಸೋಮವಾರ, ಮಂಗಳವಾರ ಆಕೆಯನ್ನು ನಿಮ್ಮ ಕ್ಲಿನಿಕ್‌ಗೆ ತಂದು ಬಿಡುತ್ತೇನೆ. ಆದರೆ, ಶುಕ್ರವಾರ ನನಗೆ ಕೀಬೋರ್ಡ್ ಕ್ಲಾಸ್ ಇದೆ' ಎಂದ!

**ಪ್ರಿಯಾಂಕ ವಿ.ಎಚ್.**